ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ,
ಯಳಂದೂರು.

ಸಿಸಿ ನಂಬರ್ 404 /2019

**PW**-1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 28.10.2022 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಟೋಯೋಟೊ ಫಾರ್ಚುನರ್ ಕಾರ್ ಸಂ. **KA**-51 **MM** 9135 ಇದನ್ನೇ ನಾವು ಜಪ್ತು ಪಡಿಸಿರುವುದು. ಸದರಿ ಫಾರ್ಚುನರ್ ವಾಹನವನ್ನು ಮುದ್ದೆ ಮಾಲು 01 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ.ಆರ್ ರವರಿಂದಃ

ನಾವು ಘಟನೆಯ ದಿನದಂದು ಭಾಗಶಃ ಯಳಂದೂರು ಮತ್ತು ಸಂತೇಮರಹಳ್ಳಿ ಹೋಬಳಿಯಲ್ಲಿ ಗಸ್ತು ಮಾಡಿರುತ್ತೇವೆ. ನನ್ನನ್ನು ಗಸ್ತಿಗಾಗಿ ನೇಮಕಾತಿ ಮಾಡಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಗುಂಬಳ್ಳಿ, ಯರಗಂಬಳ್ಳಿ ದಾಸನಹುಂಡಿ ಹಾಗೂ ಕೆಲವು ಹಳ್ಳಿಗಳಲ್ಲಿ ನಾನು ಗಸ್ತು ಮಾಡಿರುತ್ತೇನೆ ನನಗೆ ಈಗ ಕೆಲವು ಹಳ್ಳಿಗಳ ಹೆಸರುಗಳು ನೆನಪು ಇಲ್ಲ. ನಾನು ಗಸ್ತು ಮಾಡುತ್ತಿದ್ದ ಸ್ಥಳದಲ್ಲಿ 05 ವಾಹನಗಳು ಇದ್ದವು ಅದರಲ್ಲಿ ನಾಲ್ಕು ವಾಹನಗಳಿಗೆ ಅನುಮತಿ ಇತ್ತು ಹಾಗೂ ಮುದ್ದೆ ಮಾಲು 01 ಕ್ಕೆ ಮಾತ್ರ ಅನುಮತಿ ಇರಲಿಲ್ಲ. ಮುದ್ದೆ ಮಾಲು 1 ರ ಒಳಗೆ ಚುನಾವಣೆಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ನಮಗೆ ಸಿಕ್ಕಿರುವುದಿಲ್ಲ. ಮುದ್ದೆ ಮಾಲು 1 ರೊಳಗೆ ನಮಗೆ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಮುದ್ದೆ ಮಾಲು 1 ರಲ್ಲಿ ವಾಹನ ಚಾಲಕನನ್ನು ಸೇರಿಸಿ ಇಬ್ಬರಿಂದ ಮೂವರು ಜನರು ಇದ್ದರು. ಮುದ್ದೆ ಮಾಲು 01 ನ್ನು ಜಪ್ತುಪಡಿಸುವಾಗ ವಾಹನದಲ್ಲಿದ್ದವರನ್ನು ಇಳಿಸಿ ಕೇವಲ 1 ನೇ ಆರೋಪಿ ಚಾಲಕನನ್ನು ಕರೆದುಕೊಂಡು ಹೋಗಿರುತ್ತೇವೆ. ಮುದ್ದೆ ಮಾಲು 1 ರೊಳಗೆ ಇದ್ದ ಜನರ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಮುದ್ದೆ ಮಾಲು 1 ರಲ್ಲಿ 3-4 ಜನರು ಇದ್ದರು ಎಂದು ನಾನು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನಿಜ. ನಿಜವಾಗಿಯೂ 3-4 ಜನರು ಇದ್ದರೆ

ನಾನು ನನ್ನ ಹೇಳಿಕೆಯಲ್ಲಿ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನಾವು ಮುದ್ದೆ ಮಾಲು 1 ನ್ನು ಜಪ್ತು ಪಡಿಸಿದಾಗ ಸ್ಥಳದಲ್ಲಿ ಸಾಕಷ್ಟು ಜನರು ಇದ್ದರು. ನನ್ನ ಜೊತೆಗಿದ್ದ ಪೊಲೀಸರು ಮಹಜರ್ ಬರೆದಿರುತ್ತಾರೆ. ನಿಪಿ.1 ಮಹಜರ್ ಗೆ ಸ್ಥಳದಲ್ಲಿದ್ದ ಜನರ ಸಹಿಗಳನ್ನು ಪಡೆದುಕೊಂಡಿಲ್ಲ. ನಮಗೆ ಸ್ಥಳದಲ್ಲಿದ್ದ ಜನರ ಸಹಿಗಳನ್ನು ನಿಪಿ.1ಕ್ಕೆ ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಿಜ. ಮುದ್ದೆ ಮಾಲು 1 ಯಾರಿಗೆ ಸೇರಿದ್ದು ಹಾಗೂ ಅದು ಎಲ್ಲಿಂದ ಬಂದಿರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ಸ್ಥಳದಲ್ಲಿ ಯಾವುದೇ ಮಹಜರ್ ನ್ನು ಮಾಡಿಲ್ಲ ಎಂದರೆ ಸರಿಯಲ್ಲ ಹಾಗೂ ಸ್ಥಳದಲ್ಲಿ ಮುದೆ ಮಾಲು 1 ನ್ನು ಜಪ್ತು ಪಡಿಸಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 01 ಆ ದಿನದಂದು ಪ್ರಚಾರ ಕಾರ್ಯಕ್ಕೆ ಬಂದಿರುವುದಿಲಲ ಎಂದರೆ ಪ್ರಚಾರ ನಡೆಯುವ ಸ್ಥಳದಲ್ಲಿ ಮುದ್ದೆ ಮಾಲು 01 ಇತ್ತು ಎಂದು ನುಡಿಯುತ್ತಾರೆ. ಘಟನಾ ಸ್ಥಳವು ದಾಸನಹುಂಡಿಯಿಂದ ಯರಗಂಬಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಎಂದರೆ ನಿಜ. ಸದರಿ ರಸ್ತೆಯು ಯರಗಂಬಳ್ಳಿ ಯಿಂದ ಹಿಂದೆ ಹೋದರೆ ಚಾಮರಾಜನಗರಕ್ಕೆ ಹಾಗೂ ಯರಗಂಬಳ್ಳಿಯಿಂದ ಮುಂದೆ ಬಂದರೆ ಯಳಂದೂರಿಗೆ ಹೋಗುತ್ತದೆ ಎಂದರೆ ನಿಜ. ಸದರಿ ಸ್ಥಳದಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ನಿಜ. ನಾನು **Squad** ಆಗಿದ್ದ ಕಾರಣ ಪ್ರತಿನಿನವೂ ಒಂದೊಂದು ಪ್ರಕರಣವನ್ನು ದಾಖಲು ಮಾಡಬೇಕಾಗಿತ್ತು ಎಂದರೆ ಸರಿಯಲ್ಲ. ಅಂಕಿಅಂಶಗಳ ಸಲುವಾಗಿ ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 01 ನ್ನು ಪ್ರಚಾರ ಕಾರ್ಯಕ್ಕೆ ಬಳಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಪ್ರಚಾರ ನಡೆಯುತ್ತಿದ್ದ ಜಾಗದಲ್ಲಿ ಮುದ್ದೆ ಮಾಲು 01 ಇತ್ತು ಎಂದು ನುಡಿಯುತ್ತಾರೆ. ನಿಖರವಾಗಿ ಮುದ್ದೆ ಮಾಲು 01 ನ್ನು ಪ್ರಚಾರಕ್ಕೆ ಬಳಸಿರುತ್ತಾರೆಯೋ ಇಲ್ಲವೋ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ನಿಜ. ಆರೋಪಿತರು ಮುದ್ದೆ ಮಾಲು 01ನ್ನು ಪ್ರಚಾರಕ್ಕೆ ಬಳಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಚುನಾವಣಾ ಪ್ರಚಾರ ನಡೆಯುತ್ತಿತ್ತು ಎಂದು ನುಡಿಯುತ್ತಾರೆ. ಮುದ್ದೆ ಮಾಲು 01 ಚುನಾವಣಾ ಪ್ರಚಾರ ನಡೆಯುತ್ತಿದ್ದ ಸ್ಥಳದಲ್ಲೇ ಇತರೆ 04 ಕಾರ್ ಗಳೊಂದಿಗೆ ಇತ್ತು. ನಿಜವಾಗಿಯೂ ಮುದ್ದೆ ಮಾಲು 01ನ್ನು ಚುನಾವಣಾ ಪ್ರಚಾರಕ್ಕೆ ಬಳಸಿದ್ದರೇ ನಾವು ಸ್ಥಳದಲ್ಲಿ ಸಾರ್ವಜನಿಕರ ಸಹಿಗಳನ್ನು ಮಹಜರ್ ಗೆ ಪಡೆಯುತ್ತಿದ್ದೆವು ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

28.10.2022.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.